ಅವಳೂ ಅಷ್ಟೇ, ಸೂಲಗಿತ್ತಿಯಂತೆ ಗೂಡಿಗೊಮ್ಮೆ, ಟೊಂಯಾನ ಕೋಣೆಗೊಮ್ಮೆ ಓಡಾಡುತ್ತಾ ಪರಿಸ್ಥಿತಿಯನ್ನು ಗಮನಿಸುತ್ತಿದ್ದಳು. ಟೊಂಯಾ ಮರಿಮಾಡಲು ತೊಡಗಿರುವ ಸುದ್ದಿ ಊರಲ್ಲಷ್ಟೇ ಅಲ್ಲ ಸುತ್ತಮುತ್ತಲೆಲ್ಲಾ ಕಾಳ್ಗಿಚ್ಚಿನಂತೆ ಹರಡಿತು. ದಿನಾಲೂ ಜನ ಕುತೂಹಲದಿಂದ ಬರತೊಡಗಿದರು. ಟೊಂಯಾ ಸಾವಿನ ಕೊನೆ ಕ್ಷಣಗಳನ್ನು ಎಣಿಸುತ್ತಿದ್ದಾನೆಂಬಂತೆ, 'ಹೇಗನಿಸುತ್ತಿದೆ ಟೊಂಯಾ?' ಎಂದು ಕೇಳುತ್ತಿದ್ದರು.

'ಇದೊಂದು ಬೇರೆಯದೇ ರೀತಿಯ, ವಿವರಿಸಲು ಆಗದಂತ ಅನುಭವ. ತುಸು ರೋಮಾಂಚನ, ಹಾಗೆಯೇ ಕೊಂಚ ಭೀತಿಯೂ ಆಗುತ್ತಿದೆ. ಒಂದು ಮಾತು ಹೇಳುವುದಾದರೆ ಕಾವು ಕೊಡಲು ಇಪ್ಪತ್ತೊಂದು ದಿವಸ ತುಸು ದೀರ್ಘವಾಯಿತೆಂದೇ ಹೇಳಬೇಕು' ಅವನು ಉದ್ವೇಗದಿಂದ ಹೇಳುತ್ತಿದ್ದ.

ಒಂದು ಮುಂಜಾನೆ ಅವನ ಹೆಂಡತಿ ಬಂದು ಹೇಳಿದಳು: 'ಹಳದಿ ಹೇಂಟೆ ಮರಿ ಮಾಡಿದೆ. ಹತ್ತು ಮೊಟ್ಟೆಗಳಲ್ಲಿ ಮೂರು ಹಾಳಾಗಿವೆ.'

ಟೊಂಯಾನ ಎದೆ ಬಡಿದುಕೊಳ್ಳತೊಡಗಿತು. ಹಳದಿ ಕೋಳಿಯ ಫಲಿತಾಂಶ ಈಗಾಗಲೇ ಬಂದಾಯ್ತು. ಹತ್ತಕ್ಕೆ ಏಳು. ತನ್ನದು ಏನಾಗಬಹುದೋ? ನನ್ನ ಮರಿಗಳು ಯಾವಾಗ ಹೊರಬರುತ್ತವೋ? ಅವನು ದಿನ ತುಂಬಿದ ಚೊಚ್ಚಲ ಗರ್ಭಿಣಿಯಂತೆ ಆತಂಕಗೊಂಡಿದ್ದ.

ಎಲ್ಲರೂ ನಿರೀಕ್ಷೆಯಲ್ಲಿದ್ದರು.

ಅವನ ಸ್ನೇಹಿತರೂ ಕೂಡ ಉದ್ವಿಗ್ನರಾಗಿದ್ದರು. ಅವರಿಂದಾಗಿ ಪ್ರತಿಕ್ಷಣದ ವರದಿ ನೆರೆಹೊರೆಯವರೆಲ್ಲರಿಗೂ ತಲುಪುತ್ತಿತ್ತು. ಅಪರಾಹ್ನ ಮೂರು ಗಂಟೆಯ ಹೊತ್ತಿಗೆ ಟೊಂಯಾ ತೂಕಡಿಸಲಾರಂಭಿಸಿದ. ನಿದ್ದೆಗೆ ಜಾರಬೇಕು ಎನ್ನುವಷ್ಟರಲ್ಲಿ ಯಾರೋ ಕಂಕುಳಿನಲ್ಲಿ ಕಚುಗುಳಿಯಿಟ್ಟಾಂತಾಯಿತು. ಅವನು ಮೆಲ್ಲಗೆ ಕಂಕುಳಿನೊಳಗೆ ಕೈಯನ್ನಿಟ್ಟ. ಒಂದು ಸಣ್ಣ ಜೀವಿ ಅವನ ಬೆರಳುಗಳೊಳಗೆ ಒದ್ದಾಡುತ್ತಿರುವಂತೆನಿಸಿತು. ಉದ್ವೇಗದಿಂದ ತನ್ನಿಂತಾನೆ ಅವನ ಬಾಯಿಂದ ಒಂದು ಚೀತ್ಕಾರ ಹೊರಟಿತು. ಅವನು ಆ ಜೀವಿಯನ್ನು ಗಾಬರಿಯಿಂದ ಬಿಟ್ಟುಬಿಟ್ಟ. ಒಂದು ಪುಟ್ಟ ಹಳದಿ ಕೋಳಿಮರಿ ಅವನ ವಿಶಾಲವಾದ ಹೊಟ್ಟೆಯ ಮೇಲಿಂದ ಪುಟ್ಟಪುಟ್ಟಗೆ ಕುಪ್ಪಳಿಸಿ ಅವನ ರೋಮಭರಿತ ವಿಸ್ತಾರ ಎದೆಯ ಮೇಲಕೆ ಬಂದಿತು. ಗಡಂಗಿನಲ್ಲಿದ್ದ ಕುಡುಕರೆಲ್ಲಾ ಧಾವಿಸಿ ಬಂದು ಅವನ ಮಂಚದ ಸುತ್ತ ನೆರೆದು ವಿಸ್ಮಯದಿಂದ ನೋಡತೊಡಗಿದರು. ಈಗಾಗಲೇ ಅಲ್ಲಿಗೆ ಬಂದಿದ್ದ ಅವನ ಹೆಂಡತಿ ಟೊಂಯಾನ ಗಡ್ಡದೊಳಗೆ ಆಶ್ರಯ ಪಡೆದಿದ್ದ ಕೋಳಿಮರಿಯನ್ನು ಬಿಡಿಸಿಕೊಂಡಿದ್ದಳು. ಒಮ್ಮೆಲೇ ಎಲ್ಲೆಡೆ ಮೌನ ಆವರಿಸಿಕೊಂಡಿತು. ಕಾವಿಗೆ ಕುಳಿತಿದ್ದ ಹಳದಿ ಕೋಳಿ ಈಗಾಗಲೇ ತನ್ನ ಸಂತಾನವನ್ನು ಕಟ್ಟಿಕೊಂಡು ಕಿಟಕಿಯ ಹೊರಗೆ ದೊಡ್ಡ ರಾದ್ಧಾಂತವನ್ನೇ ಎಬ್ಬಿಸಿತ್ತು. ಬೆವರಿನಿಂದ ತೊಯ್ದು ಹೋಗಿದ್ದ ಟೊಂಯಾ ಕೂಗಿದ: 'ಎಡ ಕಂಕುಳಿನಿಂದ ಮತ್ತೊಂದು ಹೊರಬರುತ್ತಿದೆ!'

ಸೂಲಗಿತ್ತಿಯ ಪಾತ್ರವಹಿಸಿಕೊಂಡಿದ್ದ ಅವನ ಹೆಂಡತಿ ಚಾಕಚಕ್ಯತೆಯಿಂದ ಅದನ್ನೂ ಬಿಡಿಸಿಕೊಂಡಳು.

ಅಲ್ಲಿ ಸೇರಿದವರಿಗೆ ಇದೊಂದು ಅಪೂರ್ವ ದೃಶ್ಯವಾಗಿತ್ತು. ಎಲ್ಲರೂ ಮರಿಗಳನ್ನು ಕೈಯಲ್ಲಿ ಹಿಡಿದು ಪರೀಕ್ಷಿಸಿ ಸಂತೋಷಪಟ್ಟರು. ನಂತರದ ಇಪ್ಪತ್ತು ನಿಮಿಷಗಳಲ್ಲಿ ಒಂದೂ ಮರಿ ಹೊರಬರಲಿಲ್ಲ. ನಂತರ ಒಂದರ ಹಿಂದೆ ಒಂದೆಂಬಂತೆ ನಾಲ್ಕು ಹೊರಬಂದವು.